**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1215/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಲಲಿತಮ್ಮ | ಪ್ರಾಸಾ-6 |
| ಗಂಡನ ಹೆಸರು | : ಬಿ.ಬಿ ಬಸೇಗೌಡ | ಚಾಸಾ-3 |
| ವಯಸ್ಸು | : 66 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 09.01.2026. |
| ವಾಸಸ್ಥಳ | : ಬಕ್ಕೀ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ನನಗಿದೆ. ಚಾಸಾ-1, 2 ಮತ್ತು 4 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-3 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರ ಪೋಟೋದಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ಮತ್ತು 2 ರ ಮೇಲಿನ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ಎಂ.ಒ.1(ಸಿ) ಎಂದು ಗುರುತಿಸಲಾಯಿತು.

ದಿ.03.01.2023 ರಂದು ನಿಪಿ-3 ಕ್ಕೆ ಸಹಿಯನ್ನು ಚಾಸಾ-2 ರವರ ಜಮೀನಿನಲ್ಲಿ ಬೆ.11.00 ರಿಂದ 12.00 ರ ಸಮಯದಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಗಲಾಟೆಯ ವಿಷಯವಾಗಿ ಚಾಸಾ-1 ರವರಿಗೆ ಹಲ್ಲೆ ಮಾಡಿರುವ ಕುರಿತು ಹಾಕಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳು ದೊಣ್ಣೆಯನ್ನು ತೆಗೆದುಕೊಂಡಿದ್ದರು. ದಿ.03.01.2023 ರಂದು ಪೋಲಿಸರು ಸ್ಥಳಕ್ಕೆ ಬಂದಿದ್ದು ಮಹಜರ್ ಕ್ರಮವನ್ನು ಜರುಗಿಸಿ, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಸಮಯದಲ್ಲಿ ನಾನು, ಚಾಸಾ-1 ಮತ್ತು 4 ರವರು ಇದ್ದರು. ಸದರಿ ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಫೋಟೋವನ್ನು ತೆಗೆದಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

ನಾನು ಪ್ರತ್ಯೇಕವಾಗಿ ಒಬ್ಬರ ತೋಟಕ್ಕೆ ಕೆಲಸಕ್ಕೆ ಹೋಗುವುದಿಲ್ಲ. ದಿ.16.12.2002 ನೇ ಇಸವಿಯಲ್ಲಿ ಅಶೋಕ ಗೌಡ ಎಂಬುವವರ ತೋಟಕ್ಕೆ ಕೆಲಸಕ್ಕೆ ಹೋಗಿರುತ್ತೇನೆ. ನಾವು ಕೆಲಸಕ್ಕೆ ಬೆ.8.30 ರಿಂದ 9.00 ರ ಸಮಯಕ್ಕೆ ಹೋಗುತ್ತೇವೆ. ಆ ದಿನ ಅಶೋಕ್ ರವರ ತೋಟಕ್ಕೆ ನಾನೊಬ್ಬಳೇ ಕೆಲಸಕ್ಕೆ ಹೋಗಿರುತ್ತೇನೆ. ನಾನು ಬೆಳಗ್ಗೆ ಕೆಲಸಕ್ಕೆ ಹೋದ ಸಮಯದಲ್ಲಿ ಆರೋಪಿಗಳು ಅಶೋಕ್ ರವರ ತೋಟದ ಬಳಿ ಬಂದಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ತಿಳಿದಿರುವುದಿಲ್ಲ. ನಾನು ತೋಟಕ್ಕೆ ಹೋದಾಗಲೆ ಚಾಸಾ-1 ಮತ್ತು 2 ರವರು ನನ್ನೊಟ್ಟಿಗೆ ಬಂದಿರುತ್ತಾರೆ. ನಾನು ಕೆಲಸ ಮಾಡುತ್ತಿದ್ದ ಜಾಗದಿಂದ ಜಗಳ ನಡೆಯುತ್ತಿದ್ದ

ಜಾಗಕ್ಕೆ ಅಂದಾಜು 10 ಅಡಿ ಅಂತರವಿರಬಹುದು. ನಾನು ತೋಟಕ್ಕೆ ಹೋದಾಗ ಯಾವುದೇ ಕಾಫೀ ಬೀಜವನ್ನು ಕೊಯ್ಲು ಮಾಡಿರುವುದನ್ನು ನೋಡಿರುವುದಿಲ್ಲ. ಮೊಬೈಲ್, ದೊಣ್ಣೆ ಮತ್ತು ಕತ್ತಿಯು ಅಶೋಕ್ ರವರ ತೋಟಕ್ಕೆ ಹೋಗುವ ದಾರಿಯಲ್ಲಿ ಬಿದ್ದಿರುತ್ತದೆ. ನಾನು ಪೋಲಿಸರಿಗೆ ಗಲಾಟೆ ನೋಡಿರುವ ಬಗ್ಗೆ ಹೇಳಿರುತ್ತೇನೆ. ಚಾಸಾ-1 ಮತ್ತು 2 ರವರು ನನ್ನನ್ನು ಠಾಣೆಗೆ ಎಂದಿಗೂ ಕರೆದುಕೊಂಡು ಹೋಗಿರುವುದಿಲ್ಲ. ಚಾಸಾ-2 ರವರ ಮನೆಯ ಬಳಿ ಪೋಲಿಸರು ನನ್ನನ್ನು ಕರೆಸಿರುತ್ತಾರೆ. ಆ ಸಮಯದಲ್ಲಿ ಚಾಸಾ-4 ರವರು ಚಾಸಾ-2 ರವರ ಮನೆಯ ಬಳಿ ಬಂದಿರುವುದಿಲ್ಲ.

ನಾವು ಚಾಸಾ-2 ರವರ ಮನೆಯ ಬಳಿ ಬರುವಷ್ಟರಲ್ಲಿ ಸ.4.00 ರಿಂದ 5.00 ರ ಸಮಯವಾಗಿರುತ್ತದೆ. ಚಾಸಾ-2 ರವರ ಮನೆಯ ಬಳಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ, ಎಷ್ಟು ಸಹಿ ಪಡೆದುಕೊಂಡರು ಎಂದು ನೆನಪಾಗುತ್ತಿಲ್ಲ. ನನ್ನ ಸಹಿಯನ್ನು ಹಾಕಿದ ಪುಟದಲ್ಲಿ ಏನನ್ನು ಬರೆಯಲಾಗಿದೆ ಮತ್ತು ಅದು ಎಷ್ಟು ಪುಟ ಬರೆಯಲಾಗಿದೆ ಎಂದು ಹೇಳಿರುವುದಿಲ್ಲ. ಸಾಕ್ಷಿಯು ನಿಪಿ-3(ಸಿ) ಎಂದು ಗುರುತಿಸಿರುವ ತಮ್ಮ ಸಹಿಯನ್ನು ನೋಡಿ ಅದನ್ನು ಚಾಸಾ-2 ರವರ ಮನೆಯ ಬಳಿ ಮಾಡಿರುವುದಾಗಿ ನುಡಿದಿರುತ್ತಾರೆ. ಆ ಸಮಯದಲ್ಲಿ ನಾನೊಬ್ಬಳೇ ಸಹಿ ಮಾಡಿರುತ್ತೇನೆ. ಎಂ.ಒ.1 ಮತ್ತು 2 ನ್ನು ನಾನು ಸಹಿ ಮಾಡುವ ಸಮಯದಲ್ಲಿ ಚಾಸಾ-2 ರವರ ಮನೆಯ ಬಳಿ ನೋಡಿರುವುದಿಲ್ಲ. ಮೊಬೈಲ್, ಕತ್ತಿ ಮತ್ತು ದೊಣ್ಣೆಯು ಸಿಕ್ಕಿದ ಜಾಗದಲ್ಲಿ ನನ್ನ ಮತ್ತು ಚಾಸಾ-1 ರವರನ್ನು ನಿಲ್ಲಿಸಿ ಫೋಟೋವನ್ನು ತೆಗೆದಿರುತ್ತಾರೆ. ಸದರಿ ವಸ್ತುಗಳು ರಸ್ತೆಯ ಬದಿಯಲ್ಲಿ ಬಿದ್ದಿರುತ್ತವೆ. ನಿಪಿ-4 ಮತ್ತು 5 ರಲ್ಲಿ ಸದರಿ ವಸ್ತುಗಳು ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-4 ಮತ್ತು 5 ರಲ್ಲಿ ಕಂಡಬರುತ್ತಿರುವ ಬೇಲಿಯ ಪಕ್ಕದಲ್ಲಿರುವ ಜಮೀನು ಸುರೇಂದ್ರ ಎಂಬುವವರಿಗೆ ಸೇರಿದ್ದಾಗಿರುತ್ತದೆ. ಅದೇ ರೀತಿ ಸದರಿ ಫೋಟೋದಲ್ಲಿ ಕಂಡುಬರುತ್ತಿರುವ ರಸ್ತೆಯನ್ನು ಊರಿನವರು ಉಪಯೋಗಿಸುತ್ತಾರೆ. ಸದರಿ ರಸ್ತೆಯಿಂದ ಚಾಸಾ-2 ರವರ ತೋಟವು ಅಂದಾಜು 20 ಅಡಿ ದೂರದಲ್ಲಿರಬಹುದು.

ನಿಪಿ-3 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ ಮತ್ತು ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನನ್ನ ಸಮಕ್ಷಮ ಯಾವುದೇ ಕತ್ತಿಯಾಗಲೀ, ದೊಣ್ಣೆಯನ್ನಾಗಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-2 ಮತ್ತು ಆರೋಪಿಯ ಮಧ್ಯೆ ಯಾವುದೇ ಜಗಳ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು ಲತಾಮಣಿ ಎಂಬುವವರ ಮಧ್ಯೆ ಜಮೀನಿನ ವಿಚಾರವಾಗಿ ಮನಸ್ಥಾಪವಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅದರ ಬಾಬ್ತು ಲತಾಮಣಿ ಎಂಬುವವರ ಗಂಡ ಚಾಸಾ-2 ರವರು ವಿರುದ್ಧ ಒಂದು ಅಸಲು ದಾವೆಯನ್ನು ಹೂಡಿದ್ದು ಅದನ್ನು ಅನಾನುಕೂಲ ಮಾಡುವ ಉದ್ದೇಶದಿಂದ ಪ್ರಸ್ತುತ ಪ್ರಕರಣದಲ್ಲಿ ನನ್ನ ಮುಖಾಂತರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ಈ ದಿನ ನನ್ನೊಟ್ಟಿಗೆ ಚಾಸಾ-2 ರವರು ನ್ಯಾಯಲಯಕ್ಕೆ ಬಂದಿರುವುದಿಲ್ಲ. ಚಾಸಾ-1 ಮತ್ತು 2 ರವರ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ಮೊದಲನೇ ಬಾರಿಗೆ

ಎಂ.ಒ.1 ಮತ್ತು 2 ನ್ನು ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.